ಓಎಸ್ 38/2021

ಪಿ **ಡಬ್ಲ್ಯೂ-1** ವಿ ಶೋಭಿತಾ

**ದಿನಾಂಕ 19.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಕೆ ವಕೀಲರಿಂದ

1. ನಾನು ದಾವೆಯ ಎರಡನೇ ವಾದಿ ಎಂದರೆ ಸರಿ. ನಾನು ಗೃಹಿಣಿ. ನಾನು ಎಂ ಎ ಪಧವಿಧರೇ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ವಿಳಾಸದಲ್ಲಿ 2015 ರಿಂದ ವಾಸ ಮಾಡುತ್ತಿದ್ದೇನೆ. 2010 ರಿಂದ ಮದುವೆಯಾದ ನಂತರ ಮಂಗಳೂರು ತಾಲೂಕಿನ ತೊಕ್ಕುಟ್ಟುವಿನ ಕುಂಪಲದಲ್ಲಿ ವಾಸವಾಗಿದ್ದೇನು. 2010 ರಲ್ಲಿ ನಾನು ವಿವಾಹವಾಗಿರುತ್ತೇನೆ. ಒಂದನೇ ವಾದಿ ಸುಮಾರು 1998 ರಲ್ಲಿ ವಿವಾಹವಾಗಿರುತ್ತಾರೆ. ಮೂರನೇ ವಾದಿ ಸುಮಾರು 2007–08 ರಲ್ಲಿ ವಿವಾಹವಾಗಿರುತ್ತಾರೆ. 2012–13 ರಲ್ಲಿ ನಾಲ್ಕನೇ ವಾದಿಯ ವಿವಾಹವಾಗಿರ ಬಹುದು. ಐದನೇ ವಾದಿಗೆ ಯಾವಾಗ ಮದುವೆ ಆಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ 04.12.2011 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ.
2. ನಾವು ವಾದಿಗಳು ಎಲ್ಲಾರೂ ಸೇರಿ ನೋಟಿಸ್ ನೀಡಲು, ವಾದ ಪತ್ರ ತಯಾರಿಸಲು ಮತ್ತು ಮುಖ್ಯ ವಿಚಾರಣೆ ವಿವರಗಳನ್ನು ವಕೀಲರಿಗೆ ಅನುಭವ ಕೊಟ್ಟಿರುತ್ತೇವೆ. ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಏನೇನು ಬರೆದಿದೆ ಎಂದು ಗೊತ್ತು. ಒಂದನೇ ವಾದಿ 10ನೇ ತರಗತಿ ವಿಧ್ಯಾಭ್ಯಾಸ ಮಾಡಿದ್ದಾರೆ. ಮೂರನೇ ವಾದಿ ಪ್ರಥಮ ಪಿಯುಸಿ ಓದಿದ್ದಾರೆ. ನಾಲ್ಕನೇ ವಾದಿ ಬಿ ಕಾಂ ಪದವೀಧರೇ. ಒಂದು, ಮೂರು ಮತ್ತು ನಾಲ್ಕನೇ ವಾದಿಗಳು ಗೃಹಿಣಿ. ಆರನೇ ಪ್ರತಿವಾದಿ ನನ್ನ ತಾಯಿ. ಅವರಿಗೆ ಈಗ 73 ವರ್ಷ ವಯಸ್ಸು ಆಗಿದೆ. ಅವರು ಈಗ ಪ್ರಸ್ತುತ ನನ್ನ ಅಣ್ಣ ವಿಶ್ವನಾಥ ರವರೊಟ್ಟಿಗೆ ವಿಟ್ಲದಲ್ಲಿ ವಾಸವಾಗಿದ್ದಾರೆ. ಸುಮಾರು ಅಂದಾಜು 2016 ರ ನಂತರ ಮೂರನೇ ಪ್ರತಿವಾದಿಯ ಜೊತೆಗೆ ನನ್ನ ತಾಯಿ ವಾಸ ಮಾಡಿಕೊಂಡಿರುತ್ತಾರೆ. ಅವರ ಖರ್ಚು ವೆಚ್ಚಗಳನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸುಮಾರು 7 ವರ್ಷಗಳಿಂದ ನಾನು ಮತ್ತು ಉಳಿದ ವಾದಿಗಳು ಮತ್ತು ನನ್ನ ತಾಯಿ ಆರನೇ ಪ್ರತಿವಾದಿ ಜೊತೆ ಮಾತುಕತೆ ಇಲ್ಲ. ಉಳಿದ ಪ್ರತಿವಾದಿಗಳೊಂದಿಗೆ ನಾವು ಮಾತುಕತೆ ಮಾಡುವುದಿಲ್ಲ.

ಐದನೇ ಪ್ರತಿವಾದಿ ಜಲಜಾಕ್ಷಿ ಜೊತೆ ಮಾತುಕತೆ ಇದೆ. ಒಂದನೇ ವಾದಿ ಕಲ್ಲಡ್ಕ ದಲ್ಲಿ ವಾಸವಾಗಿದ್ದಾರೆ. 1ನೇ ವಾದಿ ಆರೋಗ್ಯವಾಗಿದ್ದಾರೆ.

3. ನಾನು ಹಿಂದೆ ಕೈರಂಗಳ ತುಂಬೆಕೋಡಿ ಶಾಲೆಯಲ್ಲಿ 2009 ರಿಂದ 2016 ರವರೆಗೆ ಶಿಕ್ಷಕಿಯಾಗಿ ವೃತ್ತಿ ನಿರ್ವಹಿಸುತ್ತಿದ್ದೆ. 2008 ರಿಂದ ಶಿಕ್ಷಕಿಯಾಗಿ ನಾನು ವೃತ್ತಿ ಪ್ರಾರಂಭಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಬಾಬಾ ಸಾಹೇಬ್ ಎಂಬುವವರಿಂದ ನಮ್ಮ ಸಮಷ್ಟಿ ಪಂಡಿನಿಂದ ಖರೀದಿಸಿ ಸಹ ಸಿದ್ದೀಸಿ ಸಮಷ್ಟಿಯಿಂದ ಅನುಭವಿಸುತ್ತಿರುವ ಜಂಟಿ ಹಕ್ಕಿನಿಂದ ಜಮೀನು ಸಹಿತ ಆಸ್ತಿಯಾಗಿದೆ ಎಂಬ ವಿಚಾರವನ್ನು ನೋಟಿಸಿನಲ್ಲಿ ಮತ್ತು ವಾದ ಪತ್ರದಲ್ಲಿ ನಮೂದಿಸಿದ್ದೇವೆ. ಸದರಿ ವಿಚಾರವನ್ನು ನೋಟಿಸಿನಲ್ಲಿ ಮತ್ತು ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಮಷ್ಟಿ ಪಂಡಿನಿಂದ ಖರೀದಿಸಿರುತ್ತೇವೆ ಎಂದು ಸುಳ್ಳಾಗಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. 2016 ರಲ್ಲಿ ನಮ್ಮ ತಾಯಿ ಮನೆಯಲ್ಲಿ ವಿಭಾಗದ ಮಾತುಕತೆ ನಡೆದಿರುತ್ತದೆ. ಸದರಿ ಮಾತುಕತೆಗೆ 9 ಜನ ಮಕ್ಕಳು ಬಂದಿರುತ್ತಾರೆ. ಆದರೇ ಯಾವುದೇ ದಾಖಲೆ ಬರವಣಿಗೆ ಆಗಲಿಲ್ಲ. ಮಾತುಕತೆಗೂ ಮೊದಲು ಪ್ರತಿವಾದಿಗಳು ಮತ್ತು ನಾವು ಅನ್ಯೋನ್ಯವಾಗಿದ್ದೇವು. ಮಾತುಕತೆ ಯಾವಾ ದಿನಾಂಕ ತಿಂಗಳು ನಡೆಯಿತು ಎಂದು ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ. ಪ್ರತಿವಾದಿ ನಂಬ್ರ 1 ರಿಂದ 4 ಮತ್ತು 6 ನಮ್ಮ ನಡುವೆ ಯಾವಾಗ ಮಾತುಕತೆ ನಿಂತಿರುತ್ತದೆ ಎಂದು ಈಗ ಗೊತ್ತಿಲ್ಲ. ನಮ್ಮೆಲ್ಲರಿಗೂ ಕನ್ನಡ ಓದಲು ಬರುತ್ತದೆ. ಫಾವರ್ ಆಫ್ ಆಟರ್ನಿ, ಮುಖ್ತಾರ ನಾಮೆ ಏನು ಎಂಬುದು ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ನಾನು ಮೂರನೇ ಕಂಡಿಕೆಯ ವಿಚಾರವನ್ನು ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ನಾವು ಸಹಿ ಮಾಡಿರುತ್ತೇವೆ ಎಂದು ಹೇಳಿರುವ ದಾಖಲೆಗಳಿಗೆ ಸಬ್ ರಿಜಿಸ್ಟರ್ ವಿಟ್ಲ ಕಚೇರಿಯಲ್ಲಿ ಸಹಿ ಮಾಡಿರುತ್ತೇವೆ. ಸಹಿ ಮಾಡಿರುತ್ತೇವೆ ಎಂದು ಹೇಳಲಾಗಿರುವ ದಾಖಲೆಗಳು ಯಾವ ಭಾಷೆಯಲ್ಲಿ ಇತ್ತು ಎಂದರೆ ಸಾಕ್ಷಿಯು ಅದನ್ನು ಓದಲು ಬಿಡಲಿಲ್ಲ ಎಂದು ನುಡಿಯುತ್ತಾರೆ. ಯಾವುದೇ ದಾಖಲೆಗನ್ನು ಓದದೇ ಸಹಿ ಹಾಕಬಾರದು ಎಂದರೆ ಸರಿ . ಸಾಕ್ಷಿ ಮುಂದುವರಿದು ಅಣ್ಣನವರ

ಮೇಲೆ ನಂಬಿಕೆ ಮೇರೆಗೆ ಸಹಿ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಸಹಿ ಹಾಕುವಾಗ ಸಹ ಸಹಿ ಹಾಕಿದ ದಾಖಲೆಯ ಹಾಳೆ ಯಾವ ಭಾಷೆಯಲ್ಲಿ ಇತ್ತು ಎಂಬ ಪ್ರಶ್ನೆಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ನನ್ನ ಸಹೋದರಿ ದಿ. **07.11.2021** ರಂದು ಪಹಣಿ ಪತ್ರಿಕೆಗಳನ್ನು ಪಡೆದುಕೊಂಡಾಗ ವಿಭಾಗದ ಮುಖಾಂತರ ಪಹಣಿ ಪತ್ರಿಕೆ ಬದಲಾವಣೆ ಆಗಿರುತ್ತದೆ ಎಂದು ಗೊತ್ತಾಯಿತು. ಯಾವ ವಾದಿ ಜೊತೆ ಹೋಗಿ ಪಹಣಿ ಪತ್ರಿಕೆ ಪಡೆದುಕೊಂಡಿರುತ್ತೇನೆ ಎಂದು ಈಗ ಗೊತ್ತಿಲ್ಲ. ಸರ್ವೆ ನಂಬ್ರ **202/12** ರ **9** ಸೆಂಟ್ಸ್ ಜಾಗಕ್ಕೆ ಸಂಬಂಧಿಸಿದಂತೆ ಒಂದನೇ ವಾದಿ ಪ್ರೇಮಲತಾ ರವರು ಬ್ರಹ್ಮಶ್ರೀ ವಿವಿದೋದ್ದೇಶ ಸಹಕಾರಿ ಸಂಘಕ್ಕೆ ಆಧಾರ ಮಾಡಿ **7.00** ಲಕ್ಷ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ಒಂದನೇ ವಾದಿಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ಬಂಟ್ವಾಳ, ದ.ಕ.**